ಓಎಸ್. 358/2020 ಪಿಡಬ್ಲ್ಯೂಃ1

ದಿನಾಂಕಃ 06.12.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಡಿ.ಎಸ್.ಜಿ. ವಕೀಲರಿಂದಃ

ನಾನು ದ್ವಿತೀಯ ಪಿ ಯು ಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ಸರ್ವೆನಂಬರ್ 48 ರಲ್ಲಿ ಎಷ್ಟು ಪೋಡುಗಳು ಇವೆ ಎಂಬುವುದು ನನಗೆ ಗೊತ್ತಿಲ್ಲ. ಸರ್ವೆನಂಬರ್ 48 ರಲ್ಲಿ ಒಟ್ಟು 9 ಪೋಡುಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆನಂಬರ್ 48 ರಲ್ಲಿ ಒಟ್ಟು 8 ಎಕರೆ ಒಂದು ಗುಂಟೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಪೈಕಿ ನನಗೆ ಒಂದು ಎಕರೆ 26 ½ ಗುಂಟೆ ಜಮೀನು ಇದೆ ಎಂದರೆ ಸರಿ. ಸರ್ವೆನಂಬರ್ 48 ರಲ್ಲಿ ಒಟ್ಟು ಎಂಟು ಎಕರೆ 1 ಗುಂಟೆ ಜಮೀನಿಗೆ ಗಡಿ ಗುರುತನ್ನು ಗುರುತಿಸಿರುತ್ತಾರೆ. ದಿನಾಂಕಃ 16.11.2018 ರಂದು ನಾವು ನಮ್ಮ ಜಮೀನಿನ ಪೂರ್ವದ ಕಡೆಯಿಂದ ಅಳತೆ ಮಾಡಿಸಿರುತ್ತೇವೆ. ದಾವಾ ಎ ಸ್ವತ್ತಿನ ಪೂರ್ವಕ್ಕೆ ಪ್ರತಿವಾದಿಯ ಜಮೀನು ಇದ್ದು ಅದರ ಸರ್ವೆನಂಬರ್ ನನಗೆ ಗೊತ್ತಿಲ್ಲ. ದಾವಾ ಎ ಸ್ವತ್ತಿನ ಪಶ್ಚಿಮಕ್ಕೆ ನಮ್ಮ ದೊಡ್ಡಪ್ಪನ ಮಗ ವಿರೂಪಾಕ್ಷರವರ ಜಮೀನು ಇದ್ದು ಅದರ ಸರ್ವೆನಂಬರ್ ನನಗೆ ಗೊತ್ತಿಲ್ಲ. ಸರ್ವೆನಂಬರ್ 48/6 ರ ಪೂರ್ವಕ್ಕೆ ಸರ್ವೆನಂಬರ್ 48/2 ಮತ್ತು ಪಶ್ಚಿಮಕ್ಕೆ ಸರ್ವೆನಂಬರ್ 48/3 ಇದೆ ಎಂದರೆ ನನಗೆ ಗೊತ್ತಿಲ್ಲ.

2. ನಾನು ದಾವಾ ಸ್ವತ್ತಿನ ಅಳತೆ ಮಾಡಿಸಲು 2018 ರ ನವೆಂಬರ್ ನಲ್ಲಿ ಅರ್ಜಿ ನೀಡಿರುತ್ತೇನೆ. ಇದಕ್ಕೆ ಸಂಬಂಧಿಸಿ ಅರ್ಜಿಯ ನಕಲನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ಸದರಿ ಅರ್ಜಿಯಲ್ಲಿ ದಾವಾ ಸ್ವತ್ತು ಮತ್ತು ಪ್ರತಿವಾದಿಯ ಸ್ವತ್ತನ್ನು ಅಳತೆ ಮಾಡುವಂತೆ ನಾನು ಕೇಳಿರುತ್ತೇನೆ. ದಾವಾ ಸ್ವತ್ತು ಮತ್ತು ಪ್ರತಿವಾದಿಯ ಜಮೀನನ್ನು ಅಳತೆ ಮಾಡಿರುತ್ತಾರೆ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಇರುವ ವಿರೂಪಾಕ್ಷರವರ ಜಮೀನನ್ನೂ ಸಹ ಅಳತೆ ಮಾಡಿರುತ್ತಾರೆ. ಇದನ್ನು ಉಳಿದು ಸರ್ವೆನಂಬರ್ 48 ರಲ್ಲಿ ಇರುವ ಬೇರೆ ಪೋಡುಗಳನ್ನು ಅಳತೆ ಮಾಡಿರುವುದಿಲ್ಲ. ನಾನು ಹೇಳಿದಂತೆ ದಾವಾ ಸ್ವತ್ತನ್ನು ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನಿಪಿಃ2 ರ ದಾಖಲೆಯನ್ನು ಸೃಷ್ಟಿ ಮಾಡಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿಃ2 ದಾಖಲೆಯ ಭಾಗವಾಗಿರುವ ಹೇಳಿಕೆಯಲ್ಲಿ ಇರುವ ಸಹಿ ಪ್ರತಿವಾದಿಯದ್ದು ಅಲ್ಲ ಎಂದರೆ ಸರಿಯಲ್ಲ. ನಿಪಿಃ2 ದಾಖಲೆಯ ಭಾಗವಾಗಿರುವ ಹೇಳಿಕೆಯಲ್ಲಿ ವಿರೂಪಾಕ್ಷರವರು ಸಹಿ ಮಾಡಿರುವುದಿಲ್ಲ. ದಾವಾ ಎ ಸ್ವತ್ತಿನ ದಕ್ಷಿಣಕ್ಕೆ ನಮ್ಮದೇ ಆಸ್ತಿ ಇದ್ದು, ಸರ್ವೆನಂಬರ್ ನನಗೆ ನೆನಪಿಲ್ಲಾ. ದಾವಾ ಸ್ವತ್ತನ್ನು ಅಳತೆ ಮಾಡಿದ ದಿನ ದಕ್ಷಿಣಕ್ಕೆ ಇರುವ ನಮ್ಮ ಜಮೀನನ್ನು ಅಳತೆ ಮಾಡಿರುವುದಿಲ್ಲ. ನನಗೆ ಸೇರಿದ 1 ಎಕರೆ 26 ½ ಗುಂಟೆ ಜಮೀನಿನಲ್ಲಿ

ನಾನು ಸ್ವಾಧೀನದಲ್ಲಿದ್ದು, ನಾನು ಹೇಳಿದಂತೆ ಪ್ರತಿವಾದಿಯವರು ಒತ್ತುವರಿ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆನಂಬರ್ 48/6 ಕ್ಕೆ ಸುತ್ತಲೂ ನಾವು ಸೋಲಾರ್ ಬೇಲಿಯನ್ನು ಹಾಕಿದ್ದೇವೆ ಎಂದರೆ ಸಾಕ್ಷಿ ನಾವು ಹಾಕಲು ಪ್ರಯತ್ನಪಟ್ಟಾಗ ಪ್ರತಿವಾದಿಯವರು ತಡೆದಿದ್ದು, ಅಳತೆ ಮಾಡಿಸಿ ಹಾಕುವಂತೆ ಹೇಳಿದ್ದು, ಪೂರ್ವದ ಕಡೆ ಬೇಲಿ ಹಾಕಿರುವುದಿಲ್ಲ ಉಳಿದ ಕಡೆ ಬೇಲಿ ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎ ಷೆಡ್ಯೂಲ್ ಸ್ವತ್ತಿನಲ್ಲಿ ವ್ಯವಸಾಯ ಮಾಡಿಸುತ್ತಿದ್ದೇನೆ ಎಂದರೆ ಸರಿ. ನಮಗೂ ಹಾಗೂ ಪ್ರತಿವಾದಿಗಳಿಗೂ ಈ ಹಿಂದಿನಿಂದಲೂ ಜಮೀನಿನ ವಿಚಾರವಾಗಿ ವೈಮನಸ್ಸು ಇತ್ತು ಎಂದರೆ ಸರಿಯಲ್ಲ.

3. ಸರ್ವೆನಂಬರ್ 48/3 ಮತ್ತು 48/6 ಜಮೀನುಗಳನ್ನು ದಾಟಿ ಉತ್ತರದ ಕಡೆ ಇರುವ ರಸ್ತೆಯಿಂದ ಪ್ರತಿವಾದಿಯು ತಮ್ಮ ಜಮೀನಿಗೆ ಹೋಗಬೇಕು ಎಂದರೆ ಸರಿ. ನಾವು ಸರ್ವೆನಂಬರ್ 48/6 ರ ಉತ್ತರದ ಕಡೆ ಇರುವ ರಸ್ತೆಯನ್ನು ಒತ್ತುವರಿ ಮಾಡಿ ಬೇಲಿ ಹಾಕಿದ್ದೇವೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಮಗೂ ಹಾಗೂ ಪ್ರತಿವಾದಿಗಳಿಗೂ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಗಳ ಜಮೀನಿನ ಮಧ್ಯೆ ಹತ್ತು ಹುಣಸೇ ಮರಗಳು ಇದ್ದವು ಎಂದರೆ ಸರಿ. ಈ ಪೈಕಿ 9 ಹುಣಸೇಮರಗಳನ್ನು ನಮ್ಮ ತಂದೆಯವರು ಕಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ವಿದ್ಯಾಭ್ಯಾಸ ಮಾಡುವುದನ್ನು ಬಿಟ್ಟ ನಂತರ ವ್ಯವಸಾಯ ಮಾಡುತ್ತಿದ್ದೇನೆ. ಈಗ ನಮ್ಮ ಮತ್ತು ಪ್ರತಿವಾದಿಗಳ ಜಮೀನಿನ ಮಧ್ಯೆ ಒಂದು ಹುಣಸೇ ಮರ ಇದೆ ಎಂದರೆ ಸರಿ. ನಮ್ಮ ಮತ್ತು ಪ್ರತಿವಾದಿಯ ಜಮೀನಿನ ಮಧ್ಯೆ ಸದರಿ ಹುಣಸೇ ಮರ ಗಡಿಗುರುತಾಗಿದೆ ಎಂದರೆ ಸರಿಯಲ್ಲ. ಸದರಿ ಹುಣಸೇಮರಕ್ಕೆ ನೇರವಾಗಿ ನಾನು ಬೇಲಿ ಹಾಕಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹುಣಸೇಮರದ ರೆಂಬೆ ಕೊಂಬೆಗಳು ಪ್ರತಿವಾದಿ ಜಮೀನಿನ ಕಡೆ ಬಾಗಿದೆ ಎಂದರೆ ಸಾಕ್ಷಿ ಸ್ವಲ್ಪ ಮಾತ್ರ ಬಾಗಿದೆ ಎಂದು ನುಡಿಯುತ್ತಾರೆ. ಸದರಿ ರೆಂಬೆ ಕೊಂಬೆಗಳು ಪ್ರತಿವಾದಿಯ ಜಮೀನಿನ ಕಡೆ ಬಾಗಿರುವುದರಿಂದ ಪ್ರತಿವಾದಿಗೆ ವ್ಯವಸಾಯ ಮಾಡಲು ತೊಂದರೆಯಾಗುತ್ತಿತ್ತು ಎಂದರೆ ಸರಿಯಲ್ಲ. ಇದರಿಂದ ಆ ಭಾಗದಲ್ಲಿ ವ್ಯವಸಾಯ ಮಾಡಲು ಆಗದೇ ಪ್ರತಿವಾದಿಗೆ ನಷ್ಟ ಆಗಿದೆ ಎಂದರೆ ಸರಿಯಲ್ಲ. ಈ ಸಂಬಂಧವಾಗಿ ನಮಗೂ ಪ್ರತಿವಾದಿಗೂ ಮಾತುಕತೆಯಾಗಿ ಸ್ವಲ್ಪ ವೈಮನಸ್ಸಾಗಿತ್ತು ಎಂದರೆ ಸರಿ. ಆ ದ್ವೇಷದಿಂದ ನಾನು ಸುಳ್ಳು ಮಾಹಿತಿಯನ್ನು ನೀಡಿ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

4. ದಾವಾ ಸ್ವತ್ತನ್ನು ಅಳತೆ ಮಾಡುವಾಗ ನಾನು, 1 ನೇ ಪ್ರತಿವಾದಿ , ನನ್ನ ತಮ್ಮ ಮುರುಗೇಶ್ , ನಮ್ಮ ಅಣ್ಣ ಚಂದ್ರಪ್ಪ ರವರು ಸ್ಥಳ ದಲ್ಲಿದ್ದರು. ಸರ್ವೆನಂಬರ್ 48 ರಲ್ಲಿ ನನ್ನನ್ನು ಮತ್ತು ಪ್ರತಿವಾದಿಯನ್ನು ಹೊರತುಪಡಿಸಿ ಉಳಿದ ಜಮೀನುಗಳ ಮಾಲೀಕರು ಯಾರೂ ಅಳತೆ ಮಾಡುವಾಗ ಸ್ಥಳ ದಲ್ಲಿ ಇರಲಿಲ್ಲಾ. ಪ್ರತಿವಾದಿಗೆ ಸೇರಿದ ಜಮೀನನ್ನು ಕಬಳಿಸಿಕೊಳ್ಳಲು ನಾನು ರೆವಿನ್ಯೂ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ನನ್ನ ಒಂದು ಗುಂಟೆ ಜಮೀನು ಒತ್ತುವರಿಯಾಗಿದ್ದರೂ ಅದು ವಿರೂಪಾಕ್ಷರವರಿಂದ ಅಥವಾ ದಕ್ಷಿಣದ ಕಡೆ ಇರುವ ನನ್ನ ಜಮೀನಿನಿಂದ ಒತ್ತುವರಿಯಾಗಿರುತ್ತದೆ ಎಂದರೆ ಸರಿಯಲ್ಲ. ಆದ ಕಾರಣ ಸರ್ವೆನಂಬರ್ 48 ರ ಪೂರ್ಣ ವಿಸ್ತೀರ್ಣವನ್ನು ಹಾಗೂ ದಕ್ಷಿಣಕ್ಕೆ ಇರುವ ನನ್ನದೇ ಜಮೀನನ್ನು ಅಳತೆ ಮಾಡಿಸಿಲ್ಲಾ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಜಮೀನನ್ನು ಒತ್ತುವರಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.